

# ಬಂಡೆ ಸೀಳಿದ ವೃಕ್ಷ

ಪ್ರಕೃತಿಯಲ್ಲಿನ ವಿಸ್ಮಯಗಳಿಗೆ ಪಾರವೇ ಇಲ್ಲ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಕುಡ್ಲೂರು ಗ್ರಾಮದ ಪಕ್ಕದಲ್ಲೇ ಇರುವ ಗುಡ್ಡವೊಂದರಲ್ಲಿ ವೃಕ್ಷವೊಂದು ಬಂಡೆ ಸೀಳಿಕೊಂಡು ಬೆಳೆದು ವಿಸ್ಮಯ ಮೂಡಿಸಿದೆ. ಬೆಂಗಳೂರು– ಹೊನ್ನಾವರ ರಸ್ತೆಯಲ್ಲಿ ಬೀರೂರು ದಾಟಿದ ನಂತರ ಕುಡ್ಲೂರು ಎಂಬ ನಾಮಫಲಕ ಕಾಣಿಸುತ್ತದೆ. ಅಲ್ಲಿಯೇ ಎಡಗಡೆಗೆ ಮುಂಡ್ರೆ ಗ್ರಾಮದೆಡೆಗೆ ಸಾಗುವ ಹಾದಿಯಲ್ಲಿದೆ. ಗುಡ್ಡಗಾಳ ಸಾಲು, ಕುರುಚಲು ಸಸ್ಯರಾಶಿ, ನೀಲಗಿರಿ, ಸಂಪಿಗೆ, ಹೊಂಗೆ ಇತ್ಯಾದಿ ಮರಗಳ, ದೈತ್ಯಾಕಾರದ ಬಂಡೆಗಳು ಇರುವ ಗುಡ್ಡಗಳ ಪರಿಧಿ ಅಪಾರ. ಇಲ್ಲಿ ಗಿಡ, ಗಂಟಿಗಳು ಬಂಡೆಗಳನ್ನೇ ಸೀಳಿಕೊಂಡು, ಸಸ್ಯ ಸಾಮ್ರಾಜ್ಯ ಸ್ಥಾಪಿಸಿರುವುದಂತೂ ನಿಜ. ಈ ಪ್ರದೇಶಕ್ಕೆ ಮಳೆಯ ಮಾರುತಗಳನ್ನು ತಡೆದು ವರುಣನ ಕೃಪಕಟಾಕ್ಷ ಇಲ್ಲಿಯೂ ಆಗುವಂತೆ ಮಾಡುವುದು ಈ ಗುಡ್ಡಗಳೇ. ಇಲ್ಲಿರುವ ವ್ಯಾಪಕ ಹಸಿರು ವನರಾಶಿಯೇ ಇದಕ್ಕೆ ಸಾಕ್ಷಿ.

'ಎನ್ನ ಬುಡಕ್ಕೆ ಕೊಡಲಿ ಹಾಕಿರಿ ನೋಡೋಣ' ಎಂದು ಮನುಷ್ಯರಿಗೆ ಸವಾಲು ಹಾಕುತ್ತಿದೆ ಈ ಮರ. ಬಂಡೆಯೊಳಗಿನಿಂದ ಉದ್ಭವಿಸಿ ಬೆಳೆದು ನಿಂತಿರುವ ಈ ಮರವನ್ನು ಅಲುಗಾಡಿಸುವುದು ಕಷ್ಟ ಸಾಧ್ಯ. ಏಕೆಂದರೆ ಇದರ ಬುಡ ಅಲ್ಲಾಡಿಸಬೇಕಾದರೆ ಬಂಡೆ ಒಡೆಯಬೇಕು. ಮಾನವವ ಅತಿಮಾನುಷ ಗುಣಗಳನ್ನು ತಿಳಿದು ಬಂಡೆಯೊಳಗೆ ಕಾಂಡ ಅವಿತುಕೊಳ್ಳುವಂತೆ ಮಾಡಿ ಜಾಣ್ಮೆ ಮೆರೆದಂತಿದೆ ಈ ವೃಕ್ಷ.

ಈ ಪ್ರದೇಶದಲ್ಲಿ ಹಿಂದೆ ಚಿತ್ರದುರ್ಗದ ಪಾಳೆಯಗಾರರ ಸಂಬಂಧಿಕರು ನೆಲೆಸಿದ್ದರು ಎಂಬುದಕ್ಕೆ ಸಾಕ್ಷಿಯಾಗಿ ಅವರು ನಿರ್ಮಿಸಿಕೊಂಡಿದ್ದ ಕೋಟೆ–ಕೊತ್ತಲ, ಹೆಬ್ಬಾಗಿಲುಗಳ ಅವಶೇಷಗಳೂ ಉಳಿದುಕೊಂಡಿವೆ.

■ ಧನ್ಯಪ್ರಸಾದ್ ಬಿ.ಜೆ.

